Report of the Joint Select Committee on the Mysore Municipalities Bill, 1962.

(Presentation.)

Sri K. PUTTASWAMY (Minister for Municipal Administration).—Sir, 1 beg to present the Report of the Joint Select Committee on the Mysore Municipalities Bill, 1962

Mr. SPEAKER.—The Report is presented.

MYSORE WILD ANIMALS AND WILD BIRDS PRESERVATION BILL, 1962.

(Motion to Consider).

Sri B. RACHIAH (Minister for Forests and Fisheries).—Sir, I beg to move :

"That the Mysore Wild Animals and Wild Birds Preservation Bill, 1962 be taken into consideration."

Mr. SPEAKER.—Motion moved :

"That the Mysore Wild Animals and Wild Birds Preservation Bill, 1962 be taken into consideration."

ಶ್ರೀ ಬಿ. ರಾಚಯ್ಯ.—ಸ್ವಾಮೀ, ಭಾರತ ದ್ಯಂತ ವನ್ಯ ಮೃಗಗಳ ಮತ್ತು ಪಕ್ಷಿಗಳ ಸಂರಕ್ಷಣಾ ಕಾರ್ಯಾರ್ಥವಾಗಿ ಸಪ್ತಾಹವನ್ನು ಆಚರಿತಕ್ಕ ಈ ಸಂದರ್ಭದಲ್ಲಿ ಈ ಒಂದು ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಮಂಡಿಸಲು ಬಹಳ ಸಂತೋಷಪಡುತ್ತೇನೆ. ಪ್ರಾಚೀನ ಕಾಲದಿಂದಲೂ ಈ ದೈವದತ್ತವಾಗಿ ಬಂದಿರತಕ್ಕ ಅರಣ್ಯಗಳು ಮತ್ತು ಅದರಲ್ಲಿ ವಾಸಮಾಡತಕ್ಕ ವನ್ಯಮೃಗಗಳು ಮತ್ತು ಪಕ್ಷಿಗಳಿಗಾಗಿ ನಮ್ಮ ಪೂರ್ವಿಕರು ಬಹಳ ಹೆಚ್ಚಿನ ಒಂದು ಪ್ರಾಶಸ್ತ್ಯವನ್ನು ಕೊಟ್ಟು ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಅದರ ಒಂದು ಪ್ರತಿಫಲವಾಗಿ ಸ್ವಲ್ಪಮಟ್ಟಿಗೆ ಹಿಂದೆ ಇದ್ದ ಪ್ರಕಾರದಲ್ಲಿಯೇ ಈ ವನ್ಯಮೃಗಗಳು ಸಮೃದ್ಧಿಯಿಂದ ಜೀವನವನ್ನು ಸಾಗಿಸುತ್ತಿವೆ. ಇತ್ತೀಚೆಗೆ ಈ ವನ್ಯಮೃಗಗಳು ಬೇಟೆ ಮಾಡತಕ್ಕ, ಷಿಕಾರಿ ಮಾಡಿ ಸಂತೋಷವನ್ನು ಪಡೆಯತಕ್ಕ ಜನರು ಒಂದು ಆಕಾಂಕ್ಷೆಯಿಂದ ಈ ವನ್ಯಮೃಗಗಳು ಸಂಪೂರ್ಣವಾಗಿ ಕ್ಷಯಿಸುತ್ತಾ ಬಂದಿವೆ. ಇದಲ್ಲದೆ ಪ್ರಾಚೀನ ಕಾಲದಲ್ಲಿ ಇದ್ದಂತಹ ಅರಣ್ಯ ಸಂಪತ್ತೂ ಕೂಡ ನಾನಾ ರೀತಿಯಿಂದ ಕ್ಷಯಿಸುತ್ತಿವೆ. ಇಲ್ಲಿ ವನ್ಯಮೃಗಗಳಿಗೆ ವಾಸಸ್ಥಾನವಾಗಿರತಕ್ಕ ಅರಣ್ಯ ಸಂಪತ್ತು ಇವೊತ್ತು ವ್ಯವಸಾಯಕೋಸ್ಕರ ಮತ್ತು ದೇಶದ ಕೈಗಾರಿಕೆ ಕ್ಷೇತ್ರಗಳನ್ನು ಸ್ಥಾಪನೆ ಮಾಡತಕ್ಕ ಮತ್ತು ಇನ್ನೂ ಅನೇಕ ರೀತಿಯಿಂದಾಗಿ ಈ ವಿಧದಲ್ಲಿ ಕಾಡು ಕೂಡ ಕ್ಷಯಿಸಿಕೊಂಡು ಬಂದಿವೆ. ವನ್ಯಮೃಗಗಳಿಗೆ ಅವು ನೆಮ್ಮದಿ ಇಲ್ಲದೆ ಬೇಟೆಗಾರರ ಹೊಡೆತಕ್ಕೆ ಬಲಿಯಾಗಿ ಬಹುಮಟ್ಟಿಗೆ ಕಡಿಮೆಯಾಗುತ್ತಿವೆ. ಬೆಳೆಯನ್ನು ಕಾಪಾಡಿಕೊಳ್ಳಬೇಕು ಎನ್ನುವ ನೆಪದಿಂದ ಏನು ಒಂದು ಲೈಸನ್ಸನ್ನು ಪಡೆದುಕೊಂಡಿದ್ದಾರೋ ಅಂತಹ ಜನ ಇವೊತ್ತು ಬೇಟೆಯ ಹವ್ಯಾಸಗಳಿಗೆ ಹೋಗಿ ಮೃಗಗಳನ್ನು ಕೊಲ್ಲುತ್ತಾ ಇರತಕ್ಕ ಸಂದರ್ಭಗಳಿಗೆ ಏನೂ ಕಡಿವಾಣ ಇಲ್ಲ. ಈ ಒಂದು ದೃಷ್ಟಿಯಿಂದ ನಮ್ಮ ಇಡೀ ಸಂಸ್ಥಾನದಲ್ಲಿ ವನ್ಯ ಮೃಗಗಳನ್ನು ಸಂರಕ್ಷಣೆ ಮಾಡತಕ್ಕ ಕಾರ್ಯದಲ್ಲಿ ಸ್ವಲ್ಪಮಟ್ಟಿಗೆ ಉಗ್ರವಾಗಿರಬೇಕು ಮತ್ತು ಅವುಗಳನ್ನು ಸಂರಕ್ಷಣೆ ಮಾಡತಕ್ಕ ಯೋಜನೆಗಳಿಗೆ ಅವಕಾಶವಾಗುವಂತಹ ಕಾನೂನು ಬೇಕು ಎಂದು ಹೇಳಿ ಇಲ್ಲಿ ಈ ವನ್ಯಮೃಗಗಳಿಗಾಗಿ ಐದು ಭಾಗಗಳಲ್ಲಿರತಕ್ಕ ಕಾನೂನುಗಳೇನಿವೆ ಅವುಗಳನ್ನು ಏಕರೂಪತೆಮಾಡಿ ತರುವ ಉದ್ದೇಶದಿಂದ ಈ ವನ್ಯಮೃಗಗಳ ಸಂರಕ್ಷಣೆಯ ಕಾನೂನನ್ನು ತಂದು ಮಂಡಿಸುತ್ತಿದ್ದೇನೆ. ಬಹುಶಃ ಇದು ಅತ್ಯಂತ ಅವಶ್ಯಕವಾಗಿರತಕ್ಕಂಥ ಮತ್ತು ಜನ